ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
**Bangalore Development Authority**
**GSTIN : 29AALB0060D1ZS**

ಸಂಖ್ಯೆ :
No. ಬೆಂಅಪ್ರಾ/ನಯೋಸ/PRL-33/ 4003 /2022-23.
C.No. 186232

ದಿನಾಂಕ :
Date : 23/3/2023

# ಕಾರ್ಯಾದೇಶ

[ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 17[2-A) ರಡಿಯಲ್ಲಿ]

ವಿಷಯ:- ಬೆಂಗಳೂರು ಆನೇಕಲ್ ತಾಲ್ಲೂಕು, ಸರ್ಜಾಪುರ ಹೋಬಳಿ, ಹುಸ್ಕೂರು ಗ್ರಾಮದ ಸರ್ವೆ ನಂ. 141/1 ರಲ್ಲಿ 3ಎ-38ಗುಂ ವಿಸ್ತೀರ್ಣದ ಪೈಕಿ 03ಗುಂ ಖರಾಬು ಹೊರತುಪಡಿಸಿ 3ಎ-35ಗುಂ ವಿಸ್ತೀರ್ಣದ ಜಮೀನಿನಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 17 (2-A) ರ ಅಡಿಯಲ್ಲಿ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಗೆ ಶ್ರೀ. ಎ. ರಾಮರೆಡ್ಡಿ, ಶ್ರೀಮತಿ ಕವಿತ ರಾಮರೆಡ್ಡಿ, ಶ್ರೀ ಮಹೇಂದ್ರನಾಥ ರೆಡ್ಡಿ, ಶ್ರೀಮತಿ ಸುನಿತ ವಿ., ಶ್ರೀ ಅರುಣ್ ಎಂ.ಆರ್., ಶ್ರೀ ಸತ್ಯ ಪ್ರಕಾಶ್, ಕು. ತ್ರಿಶಾಲ್ ರೆಡ್ಡಿ ರವರುಗಳ ಪರವಾಗಿ ಅನುಮೋದನೆ ನೀಡುವ ಬಗ್ಗೆ.

ಉಲ್ಲೇಖ:
1. ಅರ್ಜಿದಾರರಾದ ಶ್ರೀ ಪಿಳ್ಳಪ್ಪ ಶ್ರೀ ನಾಗೇಶ್ ಮತ್ತು ವೆಂಕಟಸ್ವಾಮಿ ರವರುಗಳ ಮನವಿ ದಿನಾಂಕ 11.01.2023.
2. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ನಗರ ಯೋಜನಾ ಸಮಿತಿ ಸಭೆಯ ಠರಾವು ಸಂಖ್ಯೆ 1.3.6 / 2023, ದಿನಾಂಕ 17.01.2023.
3. ಈ ಕಛೇರಿಯ ಪತ್ರ ಸಂಖ್ಯೆ ಬೆಂಅಪ್ರಾ/ನಯೋಸ/PRL-33/2887/2022-23, ದಿನಾಂಕ 25.01.2023.
4. ಕೆನರಾ ಬ್ಯಾಂಕ್ ಚಲನ್ ನಂ. GN23016350, ದಿನಾಂಕ 31.01.2023.
5. ಶ್ರೀ. ಎ. ರಾಮರೆಡ್ಡಿ, ಶ್ರೀಮತಿ ಕವಿತ ರಾಮರೆಡ್ಡಿ, ಶ್ರೀ ಮಹೇಂದ್ರನಾಥ ರೆಡ್ಡಿ, ಶ್ರೀಮತಿ ಸುನಿತ ವಿ., ಶ್ರೀ ಅರುಣ್ ಎಂ.ಆರ್., ಶ್ರೀ ಸತ್ಯ ಪ್ರಕಾಶ್, ಕು. ತ್ರಿಶಾಲ್ ರೆಡ್ಡಿ ರವರುಗಳ ಮನವಿ ದಿನಾಂಕ 27.02.2023
6. ಈ ಕಛೇರಿಯ ಅ.ಟಿ. ಪತ್ರ ಸಂಖ್ಯೆ ಬೆಂಅಪ್ರಾ/ನಯೋಸ/PRL-33/3796/2022-23, ದಿನಾಂಕ 28.02.2023.
7. ಅಧಿಕ ಜಿಲ್ಲಾ ನೊಂದಣಾಧಿಕಾರಿ, ಬೆಂಗಳೂರು ನಗರ ಜಿಲ್ಲೆ ರವರ ಕಛೇರಿಯಲ್ಲಿ ನೊಂದಾಯಿಸಲ್ಪಟ್ಟ ಪರಿತ್ಯಾಜನಾ ಪತ್ರ BDA-1-04104-2022-23, ಸಿ.ಡಿ. ನಂ. BDAD1293, ದಿನಾಂಕ 16.03.2023.

ಟಿ. ಚೌಡಯ್ಯ ರಸ್ತೆ, ಕುಮಾರಪಾರ್ಕ್ ಪಶ್ಚಿಮ, ಬೆಂಗಳೂರು 560 020. ದೂರವಾಣಿ : 080-23443206
**T. Chowdaiah Road,Kumarapark West, Bangalore 560 020, Telephone : 080-23443206**

ವಿಷಯ:- ಬೆಂಗಳೂರು ಆನೇಕಲ್ ತಾಲ್ಲೂಕು, ಸರ್ಜಾಪುರ ಹೋಬಳಿ, ಹುಸ್ಕೂರು ಗ್ರಾಮದ ಸರ್ವೆ ನಂ. 141/1 ರಲ್ಲಿ 3ಎ-38ಗುಂ ವಿಸ್ತೀರ್ಣದ ಪೈಕಿ 03ಗುಂ ಖರಾಬು ಹೊರತುಪಡಿಸಿ 3ಎ-35ಗುಂ ವಿಸ್ತೀರ್ಣದ ಜಮೀನಿನಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 17 (2-A) ರ ಅಡಿಯಲ್ಲಿ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಗೆ ಶ್ರೀ. ಎ. ರಾಮರೆಡ್ಡಿ, ಶ್ರೀಮತಿ ಕವಿತ ರಾಮರೆಡ್ಡಿ, ಶ್ರೀ ಮಹೇಂದ್ರನಾಥ ರೆಡ್ಡಿ, ಶ್ರೀಮತಿ ಸುನಿತ ವಿ., ಶ್ರೀ ಅರುಣ್ ಎಂ.ಆರ್., ಶ್ರೀ ಸತ್ಯ ಪ್ರಕಾಶ್, ಕು. ತ್ರಿಶಾಲ್ ರೆಡ್ಡಿ ರವರುಗಳ ಪರವಾಗಿ ಅನುಮೋದನೆ ನೀಡುವ ಬಗ್ಗೆ.

---

ಬೆಂಗಳೂರು ಆನೇಕಲ್ ತಾಲ್ಲೂಕು, ಸರ್ಜಾಪುರ ಹೋಬಳಿ, ಹುಸ್ಕೂರು ಗ್ರಾಮದ ಸರ್ವೆ ನಂ. 141/1 ರಲ್ಲಿ 3ಎ-38ಗುಂ ವಿಸ್ತೀರ್ಣದ ಪೈಕಿ 03ಗುಂ ಖರಾಬು ಹೊರತುಪಡಿಸಿ 3ಎ-35ಗುಂ ವಿಸ್ತೀರ್ಣದ ಪ್ರದೇಶವನ್ನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 17(2ಎ) ರ ಅಡಿಯಲ್ಲಿ demarcation and development' ಉದ್ದೇಶಕ್ಕೆ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಯನ್ನು ಶ್ರೀ. ಪಿಳ್ಳಪ್ಪ, ಶ್ರೀ.ನಾಗೇಶ್ ಮತ್ತು ಶ್ರೀ. ವೆಂಕಟಸ್ವಾಮಿ ರವರುಗಳು ಉಲ್ಲೇಖ [1] ರ ಅರ್ಜಿಯಲ್ಲಿ ಕೋರಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಉಲ್ಲೇಖ [2] ರಂತೆ ದಿನಾಂಕ 17.01.2023 ರಂದು ನಡೆದ ಪ್ರಾಧಿಕಾರದ ನಗರ ಯೋಜನಾ ಸಮಿತಿ ಸಭೆಯ ವಿಷಯ ಸಂಖ್ಯೆ 1.3.6/ 2023 ರಲ್ಲಿ ಮಂಡಿಸಿ ಚರ್ಚಿಸಲಾಗಿದ್ದು, ಚರ್ಚೆಯ ನಂತರ ಸಲ್ಲಿಸಿರುವ ಕರಡು ವಸತಿ ವಿನ್ಯಾಸ ನಕ್ಷೆಯು ಅನುಮೋದಿತ ಮಹಾಯೋಜನೆ RMP-2015 ರ ವಲಯ ನಿಯಮಾವಳಿ ಗಳ ಅನುಗುಣವಾಗಿರುವುದನ್ನು ಸಭೆಯು ಗಮನಿಸಿತು. ಪ್ರಶ್ನಿತ ಜಮೀನಿಗೆ ರಸ್ತೆ ಸಂಪರ್ಕವನ್ನು ಕಲ್ಪಿಸಲು ಲಗತ್ತಾಗಿರುವ ಭೂಪರಿವರ್ತನೆಯಾಗಿರುವ ಸರ್ವೆ ನಂ.141/3, 141/4 & 141/5 ರ ಜಮೀನುಗಳ ಮಾಲೀಕರಿಂದ ನೋಂದಾಯಿತ ಪರಿತ್ಯಜನಾ ಪತ್ರದ ಮುಖಾಂತರ ಸಂಪರ್ಕ ರಸ್ತೆ ಜಾಗವನ್ನು ಹಸ್ತಾಂತರಿಸಿದ ನಂತರ, ಬೆಂಗಳೂರು ಆನೇಕಲ್ ತಾಲ್ಲೂಕು, ಸರ್ಜಾಪುರ ಹೋಬಳಿ, ಹುಸ್ಕೂರು ಗ್ರಾಮದ ಸರ್ವೆ ನಂ. 141/1 ರಲ್ಲಿ 3ಎ-38ಗುಂ ವಿಸ್ತೀರ್ಣದ ಪೈಕಿ 03ಗುಂ ಖರಾಬು ಹೊರತುಪಡಿಸಿ 3ಎ-35ಗುಂ ವಿಸ್ತೀರ್ಣದ ಪ್ರದೇಶದಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ ಕಲಂ 17 (2-A) ರ ಅಡಿಯಲ್ಲಿ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಯನ್ನು 'Demarcation and Development' ಉದ್ದೇಶಕ್ಕೆ ಈ ಕೆಳಕಂಡ ಷರತ್ತುಗಳಿಗೊಳಪಟ್ಟು, ಅನುಮೋದಿಸಲು ತೀರ್ಮಾನಿಸಲಾಯಿತು. ಈ ಕುರಿತು ನಿಯಮಾನುಸಾರ ಮುಂದಿನ ಕ್ರಮವಹಿಸುವ ಅಧಿಕಾರವನ್ನು ಆಯುಕ್ತರಿಗೆ ಪ್ರತ್ಯಾಯೋಜಿಸಲು ನಿರ್ಣಯಿಸಲಾಯಿತು.

ಪ್ರಾಧಿಕಾರದ ನಗರ ಯೋಜನಾ ಸಮಿತಿ ಸಭೆಯ ತೀರ್ಮಾನದಂತೆ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆ ಅನುಮೋದನೆ ಸಂಬಂಧ ಅರ್ಜಿದಾರರಿಗೆ ಉಲ್ಲೇಖ [3] ರ ಈ ಕಛೇರಿ ಪತ್ರದಲ್ಲಿ ವಿವಿಧ ಶುಲ್ಕಗಳ ಬಾಬ್ತು ಒಟ್ಟು ₹.26,75,140/- [`₹. ಇಪ್ಪತ್ತಾರು ಲಕ್ಷದ ಎಪ್ಪತ್ತೈದು ಸಾವಿರದ ಒಂದುನೂರ ನಲವತ್ತು ಮಾತ್ರ] ಗಳನ್ನು ಪ್ರಾಧಿಕಾರಕ್ಕೆ ಪಾವತಿಸಲು ತಿಳಿಸಲಾಗಿತ್ತು. ಉಲ್ಲೇಖ [4] ರಲ್ಲಿನ ಪ್ರಾಧಿಕಾರದ ಕೆನರಾ ಬ್ಯಾಂಕ ಚಲನ್ ನಂ. GN23016350, ಮೂಲಕ ದಿನಾಂಕ 31.01.2023 ಗಳಂದು ಅರ್ಜಿದಾರರು ಪಾವತಿಸಿರುತ್ತಾರೆ. ಸದರಿ ಮೊತ್ತವು ಪ್ರಾಧಿಕಾರದ ಖಾತೆಗೆ ಸಂದಾಯವಾಗಿರುವ ಬಗ್ಗೆ ಪ್ರಾಧಿಕಾರದ ಆರ್ಥಿಕ ವಿಭಾಗದವರು ದಿನಾಂಕ 09.02.2023 ರಂದು ದೃಢೀಕರಿಸಿರುತ್ತಾರೆ

ಉಲ್ಲೇಖ [5] ರಂತೆ ಶ್ರೀ. ಎ. ರಾಮರೆಡ್ಡಿ, ಶ್ರೀಮತಿ ಕವಿತ ರಾಮರೆಡ್ಡಿ, ಶ್ರೀ ಮಹೇಂದ್ರನಾಥ ರೆಡ್ಡಿ, ಶ್ರೀಮತಿ ಸುನಿತ ವಿ., ಶ್ರೀ ಅರುಣ್ ಎಂ.ಆರ್., ಶ್ರೀ ಸತ್ಯ ಪ್ರಕಾಶ್, ಕು. ತ್ರಿಶಾಲ್ ರೆಡ್ಡಿ ರವರುಗಳು ಮನವಿ ಪತ್ರ ಸಲ್ಲಿಸಿ, ಪ್ರಶ್ನಿತ ಜಮೀನುಗಳನ್ನು ಹಿಂದಿನ ಮಾಲೀಕರಿಂದ ಖರೀದಿಸಿ, ಕ್ರಯ ಪತ್ರ ನೊಂದಾಯಿಸಲಾಗಿದ್ದು, ಪ್ರಸ್ತುತ ಮಾಲೀಕರ ಹೆಸರಿನಲ್ಲಿ ಬಡಾವಣೆ ನಕ್ಷೆ ಅನುಮೋದಿಸುವಂತೆ ಕೋರಿರುತ್ತಾರೆ.

ವಿಷಯ:- ಬೆಂಗಳೂರು ಆನೇಕಲ್ ತಾಲ್ಲೂಕು, ಸರ್ಜಾಪುರ ಹೋಬಳಿ, ಹುಸ್ಕೂರು ಗ್ರಾಮದ ಸರ್ವೆ ನಂ. 141/1 ರಲ್ಲಿ 3ಎ-38ಗುಂ ವಿಸ್ತೀರ್ಣದ ಪೈಕಿ 03ಗುಂ ಖರಾಬು ಹೊರತುಪಡಿಸಿ 3ಎ-35ಗುಂ ವಿಸ್ತೀರ್ಣದ ಜಮೀನಿನಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 17 (2-A) ರ ಅಡಿಯಲ್ಲಿ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಗೆ ಶ್ರೀ. ಎ. ರಾಮರೆಡ್ಡಿ, ಶ್ರೀಮತಿ ಕವಿತ ರಾಮರೆಡ್ಡಿ, ಶ್ರೀ ಮಹೇಂದ್ರನಾಥ ರೆಡ್ಡಿ, ಶ್ರೀಮತಿ ಸುನಿತ ವಿ., ಶ್ರೀ ಅರುಣ್ ಎಂ.ಆರ್., ಶ್ರೀ ಸತ್ಯ ಪ್ರಕಾಶ್, ಕು. ತ್ರಿಶಾಲ್ ರೆಡ್ಡಿ ರವರುಗಳ ಪರವಾಗಿ ಅನುಮೋದನೆ ನೀಡುವ ಬಗ್ಗೆ.

---

ತಾತ್ಕಾಲಿಕ ಕರಡು ವಸತಿ ವಿನ್ಯಾಸ ನಕ್ಷೆಯಲ್ಲಿನ ಉದ್ಯಾನವನ / ಬಯಲು ಜಾಗ, ಪಬ್ಲಿಕ್ ಯುಟಿಲಿಟಿ, ರಸ್ತೆಗಾಗಿ ಕಾಯ್ದಿರಿಸಿರುವ ಪ್ರದೇಶಗಳನ್ನು ಮತ್ತು ಪ್ರಶ್ನಿತ ಜಮೀನಿಗೆ ರಸ್ತೆ ಸಂಪರ್ಕವನ್ನು ಕಲ್ಪಿಸಲು ಲಗತ್ತಾಗಿರುವ ಭೂಪರಿವರ್ತನೆಯಾಗಿರುವ ಸರ್ವೆ ನಂ.141/3, 141/4 & 141/5 ರ ಜಮೀನುಗಳ ಮಾಲೀಕರಿಂದ ಸಂಪರ್ಕ ರಸ್ತೆ ಜಾಗವನ್ನು ನೋಂದಾಯಿತ ಪರಿತ್ಯಾಜನಾ ಪತ್ರ ಮುಖಾಂತರ ಹಸ್ತಾಂತರಿಸುವಂತೆ ಅರ್ಜಿದಾರರಿಗೆ ಮತ್ತು ಸದರಿ ಪ್ರದೇಶಗಳನ್ನು ಹಸ್ತಾಂತರಿಸಿಕೊಳ್ಳುವಂತೆ ಕಾರ್ಯಪಾಲಕ ಅಭಿಯಂತರರು [ಪೂರ್ವ ವಿಭಾಗ], ಇವರಿಗೆ ಉಲ್ಲೇಖ [6] ರ ಈ ಕಛೇರಿಯ ಪತ್ರದಲ್ಲಿ ತಿಳಿಸಲಾಗಿತ್ತು.

ತಾತ್ಕಾಲಿಕ ಕರಡು ವಸತಿ ವಿನ್ಯಾಸ ನಕ್ಷೆಯಲ್ಲಿನ ಉದ್ಯಾನವನ / ಬಯಲು ಜಾಗ, ಪಬ್ಲಿಕ್ ಯುಟಿಲಿಟಿ, ರಸ್ತೆಗಾಗಿ ಕಾಯ್ದಿರಿಸಿರುವ ಪ್ರದೇಶಗಳನ್ನು ಮತ್ತು ಪ್ರಶ್ನಿತ ಜಮೀನಿಗೆ ರಸ್ತೆ ಸಂಪರ್ಕವನ್ನು ಕಲ್ಪಿಸಲು ಲಗತ್ತಾಗಿರುವ ಭೂಪರಿವರ್ತನೆಯಾಗಿರುವ ಸರ್ವೆ ನಂ.141/3, 141/4 & 141/5 ರ ಜಮೀನುಗಳ ಮಾಲೀಕರಿಂದ ಸಂಪರ್ಕ ರಸ್ತೆ ಜಾಗವನ್ನು ನೋಂದಾಯಿತ ಪರಿತ್ಯಜನಾ ಪತ್ರದ ಮುಖಾಂತರ ದಿನಾಂಕ 16.03.2023 ರಂದು ನೋಂದಾಯಿತ ಪರಿತ್ಯಜನಾ ಪತ್ರದ ಮೂಲಕ ಉಲ್ಲೇಖ [7] ರಂತೆ ಪ್ರಾಧಿಕಾರಕ್ಕೆ ಹಸ್ತಾಂತರಿಸಿ ಕೊಂಡಿರುವುದಾಗಿ ಕಾರ್ಯಪಾಲಕ ಅಭಿಯಂತರರು, ಪೂರ್ವ ವಿಭಾಗ ಇವರು ವರದಿ ಮಾಡಿರುತ್ತಾರೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ ಬೆಂಗಳೂರು ಆನೇಕಲ್ ತಾಲ್ಲೂಕು, ಸರ್ಜಾಪುರ ಹೋಬಳಿ, ಹುಸ್ಕೂರು ಗ್ರಾಮದ ಸರ್ವೆ ನಂ. 141/1 ರಲ್ಲಿ 3ಎ-38ಗುಂ ವಿಸ್ತೀರ್ಣದ ಪೈಕಿ 03ಗುಂ ಖರಾಬು ಹೊರತುಪಡಿಸಿ 3ಎ-35ಗುಂ ವಿಸ್ತೀರ್ಣದ ಜಮೀನಿನಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 17(2-A) ರ ಅಡಿಯಲ್ಲಿ demarcation and development' ಉದ್ದೇಶಕ್ಕೆ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಯನ್ನು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಅನುಮೋದನೆ ನೀಡಲಾಗಿದೆ.

| | |
|---|---|
| 1. | ರೇರಾ ಅಧಿನಿಯಮ 2016 ಹಾಗೂ ಸಂಬಂಧಿತ ಅಧಿನಿಯಮಗಳು 2017 ರನ್ವಯ ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರದಲ್ಲಿ ನೊಂದಣಿ ಮಾಡಿಸುವುದು. |
| 2. | ಪ್ರಸ್ತಾವನೆಗೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಾಗಲೀ / ಲೋಕಾಯುಕ್ತದಲ್ಲಾಗಲೀ ಯಾವುದೇ ವಿಚಾರಣಾ ಪ್ರಾಧಿಕಾರದಲ್ಲಾಗಲೀ ಪ್ರಕರಣ ದಾಖಲಾಗಿದ್ದಲ್ಲಿ ಅರ್ಜಿದಾರರೇ ಬಗೆಹರಿಸಿಕೊಳ್ಳತಕ್ಕದ್ದು. |
| 3. | ವಸತಿ ಬಡಾವಣೆ ನಕ್ಷೆಯಂತೆ ವಿವಿಧ ಅಳತೆಯ ಒಟ್ಟು 38 ವಸತಿ ನಿವೇಶನಗಳಿದ್ದು (34 ವಿವಿಧ ಅಳತೆ/ ಅನಿಯತ ನಿವೇಶನಗಳು + 4 EWS ನಿವೇಶನಗಳು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಪೂರ್ವಾನುಮೋದನೆ ಇಲ್ಲದೆ ನಿವೇಶನಗಳ ಅಳತೆ ಹಾಗೂ ನಿವೇಶನಗಳ ಒಟ್ಟು ಸಂಖ್ಯೆಯನ್ನು ಅನುಮೋದಿತ ಬಡಾವಣೆ ನಕ್ಷೆಯಲ್ಲಿ ಬದಲಾಯಿಸತಕ್ಕದ್ದಲ್ಲ. |
| 4. | ಅನುಮೋದಿತ ಬಡಾವಣೆ ನಕ್ಷೆಯಂತೆಯೇ ಅಭಿವೃದ್ಧಿ ಕಾರ್ಯಗಳನ್ನು ಕಾರ್ಯಗತ ಮಾಡುವುದು, ಪ್ರಾಧಿಕಾರದ ಪೂರ್ವಾನುಮತಿ ಇಲ್ಲದೆ ಯಾವುದೇ ಬದಲಾವಣೆಗಳನ್ನು ಮಾಡುವಂತಿಲ್ಲ. |

ವಿಷಯ:- ಬೆಂಗಳೂರು ಆನೇಕಲ್ ತಾಲ್ಲೂಕು, ಸರ್ಜಾಪುರ ಹೋಬಳಿ, ಹುಸ್ಕೂರು ಗ್ರಾಮದ ಸರ್ವೆ ನಂ. 141/1 ರಲ್ಲಿ 3ಎ-38ಗುಂ ವಿಸ್ತೀರ್ಣದ ಪೈಕಿ 03ಗುಂ ಖರಾಬು ಹೊರತುಪಡಿಸಿ 3ಎ-35ಗುಂ ವಿಸ್ತೀರ್ಣದ ಜಮೀನಿನಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 17 (2-A) ರ ಅಡಿಯಲ್ಲಿ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಗೆ ಶ್ರೀ. ಎ. ರಾಮರೆಡ್ಡಿ, ಶ್ರೀಮತಿ ಕವಿತ ರಾಮರೆಡ್ಡಿ, ಶ್ರೀ ಮಹೇಂದ್ರನಾಥ ರೆಡ್ಡಿ, ಶ್ರೀಮತಿ ಸುನಿತ ವಿ., ಶ್ರೀ ಅರುಣ್ ಎಂ.ಆರ್., ಶ್ರೀ ಸತ್ಯ ಪ್ರಕಾಶ್, ಕು. ತ್ರಿಶಾಲ್ ರೆಡ್ಡಿ ರವರುಗಳ ಪರವಾಗಿ ಅನುಮೋದನೆ ನೀಡುವ ಬಗ್ಗೆ.

---

| | |
|---|---|
| 5. | ಬಡಾವಣೆಯಲ್ಲಿನ ಪ್ರತಿ ನಿವೇಶನಕ್ಕೂ ಕುಡಿಯುವ ನೀರು, ತ್ಯಾಜ್ಯ ನೀರು, ವಿಲೇವಾರಿಗಾಗಿ ಒಳಚರಂಡಿ ವ್ಯವಸ್ಥೆಯನ್ನು ಅರ್ಜಿದಾರರೇ ಕಲ್ಪಿಸತಕ್ಕದ್ದು ಹಾಗೂ ಉದ್ದೇಶಿತ ವಸತಿ ವಿನ್ಯಾಸದಲ್ಲಿ ಒಟ್ಟು ಕ್ಷೇತ್ರದಲ್ಲಿ ಬೀಳುವ ಮಳೆನೀರು ವ್ಯರ್ಥವಾಗಿ ಹೋಗದಂತೆ ಉದ್ದೇಶಿತ ಜಮೀನಿನಲ್ಲಿಯೇ ಭೂಮಿಯ ಒಳಗಡೆ ಇಂಗುವಂತೆ ಮಾಡಲು ವಿನ್ಯಾಸವನ್ನು ಸಿದ್ದಪಡಿಸಿ ಪೂರ್ಣ ವಿವರಗಳನ್ನು ನಕ್ಷೆಯಲ್ಲಿ ಗುರುತಿಸಿ ತೋರಿಸತಕ್ಕದ್ದು. |
| 6. | ಉದ್ಯಾನವನ ಮತ್ತು ಬಯಲುಜಾಗಗಳನ್ನು ಅನುಮೋದಿತ ಬಡಾವಣೆ ನಕ್ಷೆ ಪ್ರಕಾರ ಶೇ.100 ರಷ್ಟು ನಿವೇಶನಗಳ ಬಿಡುಗಡೆ ಕೋರುವ ಮೊದಲು Chain link Fencing ಮಾಡಿ ಹಾಗೂ ಅಭಿವೃದ್ಧಿಪಡಿಸುವುದು. |
| 7. | ವಸತಿ ಬಡಾವಣೆ ನಕ್ಷೆಯಲ್ಲಿ ತೋರಿಸಿರುವ ರಸ್ತೆ ಅಗಲವನ್ನು ಯಾವುದೇ ಕಾರಣಕ್ಕೂ ಕಡಿಮೆ ಮಾಡಬಾರದು. |
| 8. | ಬಫರ್ ಪ್ರದೇಶದಲ್ಲಿ ಗಿಡ-ಮರಗಳನ್ನು ಬೆಳಸತಕ್ಕದ್ದು |
| 9. | ಪ್ರಸ್ತಾವನೆಗೆ ಸಂಬಂಧಿಸಿದಂತೆ ಅರ್ಜಿದಾರರು ಸುಳ್ಳು ದಾಖಲೆ ಅಥವಾ ಇನ್ನಿತರೆ ಪೋರ್ಜರಿ ದಾಖಲಾತಿಗಳನ್ನು ನೀಡಿರುವುದು ರುಜುವಾತಾದಲ್ಲಿ ಈಗ ನೀಡಿರುವ ಬಡಾವಣೆ ನಕ್ಷೆ ಅನುಮೋದನೆಯು ತನ್ನಿಂದತಾನೆ ರದ್ದಾಗುವುದೆಂದು ಭಾವಿಸತಕ್ಕದ್ದು. |
| 10. | ಅರ್ಜಿದಾರರು ಉದ್ದೇಶಿರುವ ಜಮೀನಿನಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಥವಾ ಅನ್ಯ ಖಾಸಗಿ ಜಮೀನುಗಳೇನಾದರೂ ಸೇರಿಕೊಂಡಿರುವುದು ತಿಳಿದುಬಂದಲ್ಲಿ ಅಂತಹ ಸಂದರ್ಭದಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆಯುಕ್ತರು ಅನುಮೋದಿತ ಬಡಾವಣೆ ನಕ್ಷೆಯನ್ನು ಮಾರ್ಪಾಡು ಮಾಡಲು ಅಥವಾ ಹಿಂತೆಗೆದುಕೊಳ್ಳಲು ಅಧಿಕಾರವುಳ್ಳವರಾಗಿರುತ್ತಾರೆ. |
| 11. | ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಮುಂದೆ ಸೂಚಿಸಬಹುದಾದ ಎಲ್ಲಾ ತಾಂತ್ರಿಕ ವಿಷಯಗಳಿಗೆ ಹಾಗೂ ಶುಲ್ಕಗಳನ್ನು ತುಂಬುವುದರ ನಿರ್ಣಯಕ್ಕೆ ಅರ್ಜಿದಾರರು ಬದ್ದರಾಗಿರುವುದು. |
| 12. | ಪ್ರಸ್ತಾಪಿತ ವಿನ್ಯಾಸದಲ್ಲಿನ ವಸತಿ ಅಭಿವೃದ್ಧಿಗಳಿಂದ ಉತ್ಪಾದನೆಯಾಗುವ ಘನ ತ್ಯಾಜ್ಯಗಳನ್ನು, ಹಸಿತ್ಯಾಜ್ಯ, ಒಣತ್ಯಾಜ್ಯ, ಪ್ಲಾಸ್ಟಿಕ್ ಮತ್ತು ಇತ್ಯಾದಿಗಳಾಗಿ ವಿಂಗಡಿಸಲು ಹಾಗೂ Compost ಮಾಡಲು ಸಲ್ಲಿಸಿರುವ ಪ್ರಮಾಣ ಪತ್ರದಂತೆ ಪಕ್ಕದಲ್ಲಿರುವ ಬಡಾವಣೆಯಲ್ಲಿನ ಜಾಗವನ್ನು ಉಪಯೋಗಿಸುವುದು. |
| 13. | ವಸತಿ ವಿನ್ಯಾಸದಲ್ಲಿ ಎಲ್ಲಾ ರಸ್ತೆಗಳನ್ನು IRC Specification ಪ್ರಕಾರ ಅಭಿವೃದ್ಧಿ ಪಡಿಸತಕ್ಕದ್ದು, ಅದಕ್ಕೂ ಮುಂಚೆ ಅಂದಾಜುಪಟ್ಟಿಯನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಭಿಯಂತರ ವಿಭಾಗದಿಂದ ಅನುಮೋದಿಸಿಕೊಳ್ಳತಕ್ಕದ್ದು, ರಸ್ತೆ ಅಭಿವೃದ್ಧಿ ಪಡಿಸುವ ಸಮಯದಲ್ಲಿ ಅಭಿಯಂತರ ವಿಭಾಗದಿಂದ ಸ್ಥಳ ಪರಿಶೀಲನೆಗಾಗಿ ಮತ್ತು ಕಾಮಗಾರಿ ಪರಿಶೀಲನೆಗೆ ಅನುವು ಮಾಡಿಕೊಡತಕ್ಕದ್ದು. |
| 14. | ವಸತಿ ಬಡಾವಣೆಯಲ್ಲಿನ ಪ್ರತಿ ನಿವೇಶನಕ್ಕೂ ಸೋಲಾರ್ ಲೈಟಿಂಗ್ ಮತ್ತು ಸೋಲಾರ್ ವಾಟರ್ ಹೀಟಿಂಗ್ ವ್ಯವಸ್ಥೆಯನ್ನು ಅಳವಡಿಸಕ್ಕದ್ದು. |

ವಿಷಯ:- ಬೆಂಗಳೂರು ಆನೇಕಲ್ ತಾಲ್ಲೂಕು, ಸರ್ಜಾಪುರ ಹೋಬಳಿ, ಹುಸ್ಕೂರು ಗ್ರಾಮದ ಸರ್ವೆ ನಂ. 141/1 ರಲ್ಲಿ 3ಎ-38ಗುಂ ವಿಸ್ತೀರ್ಣದ ಪೈಕಿ 03ಗುಂ ಖರಾಬು ಹೊರತುಪಡಿಸಿ 3ಎ-35ಗುಂ ವಿಸ್ತೀರ್ಣದ ಜಮೀನಿನಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 17 (2-A) ರ ಅಡಿಯಲ್ಲಿ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಗೆ ಶ್ರೀ. ಎ. ರಾಮರೆಡ್ಡಿ, ಶ್ರೀಮತಿ ಕವಿತ ರಾಮರೆಡ್ಡಿ, ಶ್ರೀ ಮಹೇಂದ್ರನಾಥ ರೆಡ್ಡಿ, ಶ್ರೀಮತಿ ಸುನಿತ ವಿ., ಶ್ರೀ ಅರುಣ್ ಎಂ.ಆರ್., ಶ್ರೀ ಸತ್ಯ ಪ್ರಕಾಶ್, ಕು. ತ್ರಿಶಾಲ್ ರೆಡ್ಡಿ ರವರುಗಳ ಪರವಾಗಿ ಅನುಮೋದನೆ ನೀಡುವ ಬಗ್ಗೆ.

---

| | |
|---|---|
| 15. | ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ಕಲಂ 17-2ಬಿ ರನ್ವಯ ವಿನ್ಯಾಸವನ್ನು ಪೂರ್ಣ ಪ್ರಮಾಣದಲ್ಲಿ ಅಭಿವೃದ್ಧಿ ಪಡಿಸಿದ ನಂತರ, ಸಕ್ಷಮ ಪ್ರಾಧಿಕಾರಗಳಿಂದ ಸಿವಿಲ್, ವಿದ್ಯುತ್, ಒಳಚರಂಡಿ ಮತ್ತು ನೀರು ಸರಬರಾಜು ಕಾಮಗಾರಿಗಳನ್ನು ಪೂರ್ಣಗೊಳಿಸಿರುವ ಕುರಿತು ಪ್ರಮಾಣ ಪತ್ರಗಳೊಂದಿಗೆ ಕೋರಿಕೆ ಸಲ್ಲಿಸಿದಲ್ಲಿ ಅಂತಿಮ ವಿನ್ಯಾಸವನ್ನು ಮತ್ತು ನಿವೇಶನಗಳನ್ನು ಬಿಡುಗಡೆಗೊಳಿಸಲಾಗುವುದು. |
| 16. | ನಿವೇಶನಗಳಲ್ಲಿ ಕಟ್ಟಡ ನಿರ್ಮಾಣ ಮಾಡುವ ಪೂರ್ವಭಾವಿಯಾಗಿ ಸಂಬಂಧ ಪಟ್ಟ ಸಕ್ಷಮ ಪ್ರಾಧಿಕಾರದಿಂದ ಕಟ್ಟಡ ನಕ್ಷೆಗೆ ಅನುಮೋದನೆ ಪಡೆಯತಕ್ಕದ್ದು. |
| 17. | ಸಿವಿಲ್ ಕಾಮಗಾರಿ ಕೆಲಸಗಳನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಮೇಲ್ವಿಚಾರಣೆಯಲ್ಲಿ ಅರ್ಜಿದಾರರೇ ಕಾರ್ಯಗತ ಮಾಡತಕ್ಕದ್ದು. |
| 18. | ಅಭಿವೃದ್ಧಿದಾರರು ಕೊಳಚೆ ನೀರನ್ನು ಬಯಲು ಜಾಗ/ ಖಾಲಿ ಜಾಗಗಳಿಗೆ ಬಿಡದೇ ಸಂಸ್ಕರಿಸಿ ಕುಡಿಯುವ ನೀರಿನ ಹೊರತಾಗಿ ಉಳಿದ ಬಳಕೆಗಾಗಿ ಬಳಸತಕ್ಕದು. |
| 19. | ಬಡಾವಣೆಯಲ್ಲಿನ ಪ್ರತಿ ನಿವೇಶನಕ್ಕೆ ಗೃಹ ಬಳಕೆ, ಕುಡಿಯುವ ನೀರಿನ ಹಾಗೂ ಇತರೆ ಉಪಯೋಗದ ನೀರು ಸರಬರಾಜು ವ್ಯವಸ್ಥೆಗಾಗಿ ಪ್ರತ್ಯೇಕ ಕೊಳವೆಗಳನ್ನು ಅಳವಡಿಸತಕ್ಕದ್ದು. |
| 20. | ಅಭಿವೃದ್ಧಿದಾರರು ಉದ್ಯಾನವನಕ್ಕಾಗಿ ಕಾಯ್ದಿರಿಸಿರುವ ಪ್ರದೇಶದಲ್ಲಿ ವಿವಿಧ ಜಾತಿಯ ಗಿಡಮರಗಳನ್ನು ಬೆಳಸಿ ಅಭಿವೃದ್ಧಿಪಡಿಸುವುದು ಹಾಗೂ ಅದೇ ಉದ್ದೇಶಕ್ಕಾಗಿ ಕಾಯ್ದಿರಿಸಿ ಉಪಯೋಗಿಸತಕ್ಕದ್ದು ಬೇರೆ ಯಾವುದೇ ಉದ್ದೇಶಗಳಿಗೆ ಬದಲಾಯಿಸಬಾರದು. |
| 21. | BESCOM ನಿರ್ದೇಶನದಂತೆ ಬಡಾವಣೆಯಲ್ಲಿ ವಿದ್ಯುತ್ ಕಾಮಗಾರಿಗಳನ್ನು ಕೈಗೊಂಡು ಪೂರ್ಣಗೊಳಿಸಲು ಕ್ರಮ ಕೈಗೊಳ್ಳತಕ್ಕದ್ದು. |
| 22. | ಸದರಿ ವಸತಿ ವಿನ್ಯಾಸದಲ್ಲಿ ಪ್ರಾಧಿಕಾರದ ದಿನಾಂಕ.08/11/2010 ರ ಸುತ್ತೋಲೆಯಂತೆ ಒಟ್ಟು ವಸತಿ ನಿವೇಶನಗಳ ಶೇ.10 ರಷ್ಟು ವಸತಿ ನಿವೇಶನಗಳನ್ನು ಆರ್ಥಿಕ ಹಿಂದುಳಿದ ವರ್ಗದವರಿಗಾಗಿ (EWS) ಮತ್ತು ಕಡಿಮೆ ಆದಾಯ ವರ್ಗದವರಿಗಾಗಿ (LIG) ಕಾಯ್ದಿರಿಸಕ್ಕದ್ದು, ಆ ವರ್ಗದವರಿಗೆ ನಿವೇಶನವನ್ನು ಹಂಚಿಕೆ ಮಾಡತಕ್ಕದ್ದು. ಆರ್ಥಿಕ ದುರ್ಬಲ ವರ್ಗದವರಿಗಾಗಿ (EWS) ಕಾಯ್ದಿರಿಸಿದ ನಿವೇಶನಗಳನ್ನು ಒಂದುಗೂಡಿಸಿ ದೊಡ್ಡ ಅಳತೆಯ ನಿವೇಶನವನ್ನಾಗಿ ಸಮಾಮೇಲನಾ ಮಾಡಿದ್ದಲ್ಲಿ ಮೂಲ ಆಶಯ ವಿಫಲವಾಗುವುದರಿಂದ ಆರ್ಥಿಕವಾಗಿ ಹಿಂದುಳಿದ ವರ್ಗದವರಿಗಾಗಿ (EWS) ಕಾಯ್ದಿರಿಸಿದ ವಸತಿ ನಿವೇಶನಗಳನ್ನು ಸಮಾಮೇಲನಾ ಮಾಡತಕ್ಕದ್ದಲ್ಲ. |
| 23. | BWSSB / KUWSDB/RWS, BESCOM ಇಲಾಖೆಗಳಿಂದ ಹಾಗೂ ಅಗತ್ಯಕ್ಕನುಗುಣವಾಗಿ KSPCB ರವರಿಂದ ಹಾಗೂ ಇತರೆ ಸಂಬಂಧಿತ ಇಲಾಖೆಗಳಿಂದ ಕಾಮಗಾರಿ ಮುಕ್ತಾಯ ಪ್ರಮಾಣ ಪತ್ರಗಳನ್ನು ಪಡೆದು ಪ್ರಾಧಿಕಾರಕ್ಕೆ ಸಲ್ಲಿಸುವುದು. |

ವಿಷಯ:- ಬೆಂಗಳೂರು ಆನೇಕಲ್ ತಾಲ್ಲೂಕು, ಸರ್ಜಾಪುರ ಹೋಬಳಿ, ಹುಸ್ಕೂರು ಗ್ರಾಮದ ಸರ್ವೆ ನಂ. 141/1 ರಲ್ಲಿ 3ಎ-38ಗುಂ ವಿಸ್ತೀರ್ಣದ ಪೈಕಿ 03ಗುಂ ಖರಾಬು ಹೊರತುಪಡಿಸಿ 3ಎ-35ಗುಂ ವಿಸ್ತೀರ್ಣದ ಜಮೀನಿನಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 17 (2-A) ರ ಅಡಿಯಲ್ಲಿ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಗೆ ಶ್ರೀ. ಎ. ರಾಮರೆಡ್ಡಿ, ಶ್ರೀಮತಿ ಕವಿತ ರಾಮರೆಡ್ಡಿ, ಶ್ರೀ ಮಹೇಂದ್ರನಾಥ ರೆಡ್ಡಿ, ಶ್ರೀಮತಿ ಸುನಿತ ವಿ., ಶ್ರೀ ಅರುಣ್ ಎಂ.ಆರ್., ಶ್ರೀ ಸತ್ಯ ಪ್ರಕಾಶ್, ಕು. ತ್ರಿಶಾಲ್ ರೆಡ್ಡಿ ರವರುಗಳ ಪರವಾಗಿ ಅನುಮೋದನೆ ನೀಡುವ ಬಗ್ಗೆ.

---

| | |
|---|---|
| 24. | ಬಡಾವಣೆ ನಕ್ಷೆಯಲ್ಲಿ Transformer Yard, RWH, STP, OHT, SWM ಗಳಿಗಾಗಿ ಸೂಕ್ತ ಜಾಗಗಳನ್ನು ಕಾಯ್ದಿರಿಸಿರುವುದಿಲ್ಲವಾದ್ದರಿಂದ ಇದಕ್ಕೆ ಹೊಂದಿಕೊಂಡಂತೆ ಇರುವ ವಿನ್ಯಾಸದಲ್ಲಿನ ಸೌಕರ್ಯಗಳನ್ನು ಪ್ರಮಾಣ ಪತ್ರದಲ್ಲಿ ತಿಳಿಸಿರುವಂತೆ ಸಂಬಂಧಪಟ್ಟ ಸಂಸ್ಥೆಯ ಅಭಿಪ್ರಾಯದಂತೆ ಅಭಿವೃದ್ಧಿಪಡಿಸುವುದು. |
| 25. | ಪ್ರಾಧಿಕಾರವು ಆಗಿಂದಾಗ್ಗೆ ವಿಧಿಸುವ ಇತರೆ ಷರತ್ತುಗಳಿಗೆ ಬದ್ದರಾಗಿರುವುದು. |

ಮೇಲ್ಕಂಡ ಷರತ್ತುಗಳೊಂದಿಗೆ ಬೆಂಗಳೂರು ಆನೇಕಲ್ ತಾಲ್ಲೂಕು, ಸರ್ಜಾಪುರ ಹೋಬಳಿ, ಹುಸ್ಕೂರು ಗ್ರಾಮದ ಸರ್ವೆ ನಂ . 141/1 ರಲ್ಲಿ 3ಎ-38ಗುಂ ವಿಸ್ತೀರ್ಣದ ಪೈಕಿ 03ಗುಂ ಖರಾಬು ಹೊರತುಪಡಿಸಿ 3ಎ-35ಗುಂ ವಿಸ್ತೀರ್ಣದ ಪ್ರದೇಶವನ್ನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 17(2-A) ರ ಅಡಿಯಲ್ಲಿ demarcation and development' ಉದ್ದೇಶಕ್ಕೆ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲಾಗಿದೆ.

ಆಯುಕ್ತರು,
ಬೆಂಅಪ್ರಾ, ಬೆಂಗಳೂರು

ಇವರಿಗೆ,

ಶ್ರೀ. ಎ. ರಾಮರೆಡ್ಡಿ, ಶ್ರೀಮತಿ ಕವಿತ ರಾಮರೆಡ್ಡಿ,
ಶ್ರೀ ಮಹೇಂದ್ರನಾಥ ರೆಡ್ಡಿ, ಶ್ರೀಮತಿ ಸುನಿತ ವಿ.,
ಶ್ರೀ ಅರುಣ್ ಎಂ.ಆರ್., ಶ್ರೀ ಸತ್ಯ ಪ್ರಕಾಶ್,
ಕು. ತ್ರಿಶಾಲ್ ರೆಡ್ಡಿ,
**# 48, I-Star Building, 100 Feet,**
**Koramangala 4th Block,**
**Bangalore – 560 034.**